ಬಾಂಡೂಜಿ ಹಾಗೂ ಹಾರಾಧನ್ ಘೋಷ್ ವಿಷ್ಣುಪುರದಿಂದ ಕಾಲುನಡಿಗೆಯಲ್ಲಿ ಜಯರಾಮಬಾಟಿಗೆ ಹೊರಟೆವು. ರಾಜ ಗಾಂವ್‍ದಿಂದ ಎತ್ತಿನಗಾಡಿಯಲ್ಲಿ ಮಧ್ಯಾಹ್ನದ ವೇಳೆಗೆ ಕೊತುಲ್ ಪುರ ತಲುಪಿದೆವು. ಅಲ್ಲಿಂದ ಹೊರಟು, ತಪ್ಪುದಾರಿಯಲ್ಲಿ ನಡೆದು ಸುತ್ತಾಡುತ್ತಾ ಕೊನೆಗೆ ಆಮೋದರ ನದೀತೀರವನ್ನು ತಲುಪಿದೆವು – ಆಗ ರಾತ್ರಿ ತುಂಬ ತಡವಾಗಿಬಿಟ್ಟಿತ್ತು. ಪೊದರು ಗಳನ್ನು ಬಿಟ್ಟರೆ ಬೇರೇನೂ ಕಾಣಿಸುತ್ತಿರಲಿಲ್ಲ. ಅಷ್ಟರಲ್ಲಿ ಒಬ್ಬಾತ ಬೆಳಕಿನೊಂದಿಗೆ ಅಲ್ಲಿಗೆ ಬಂದ. ಜಯರಾಮಬಾಟಿಗೆ ಹೋಗುವ ದಾರಿ ಯಾವುದೆಂದು ಅವನನ್ನು ಕೇಳಿದೆವು. ಅವನು ಹೇಳಿದ: ''ಶಾರದೆಯ ಮನೆಗೆ ಹೋಗುತ್ತೀರಾ ? ಅವಳೇ ನನ್ನನ್ನು ಕಳು ಹಿಸಿದ್ದಾಳೆ, ಬನ್ನಿ. ಅವಳು ಹೇಳಿದಳು, 'ನಾಲ್ಕು ಮಂದಿ ಮಕ್ಕಳು ಸುತ್ತಾಡುತ್ತಾ ಬರುತ್ತಿದ್ದಾರೆ. ಅವರಿಗೆ ಬೆಳಕು ತೋರಿಸುತ್ತಾ ಕರೆದುಕೊಂಡು ಬಾ' ಅಂತ'' ಹೊರಡುವ ಮೊದಲೇ ನಾವು ಅಲ್ಲಿಗೆ ಹೋಗುವ ವಿಷಯವನ್ನು ಅವರಿಗೆ ತಿಳಿಸಿರಲಿಲ್ಲ. ಎಲ್ಲ ವನ್ನೂ ಕೇಳಿದ ಶ್ರೀಮಾತೆಯವರು ಹೇಳಿದರು, ''ನೀವು ಮಧ್ಯಾಹ್ನ ಬಂದುಬಿಡುತ್ತೀರಿ ಎಂದುಕೊಂಡಿದ್ದೆ. ನಿಮಗೆ ಬರ ಲಾಗಲಿಲ್ಲ. ಇಲ್ಲಿಗೆ ಬರಬೇಕಾಗಿದ್ದರೆ ಸುತ್ತಿ ಸುತ್ತಿ ಬರಬೇಕು.'' ನಾವು ಎರಡು ದಿನ ಶ್ರೀಮಾತೆಯವರ ಮನೆಯಲ್ಲಿದ್ದೆವು. ''ವಾರುಣೀ[೨] ಸ್ನಾನ ಮಾಡುತ್ತೇನೆ ಎಂದು ಹೇಳಿ ಬಂದಿದ್ದೇನೆ, ಬೇಗನೆ ಹಿಂದಿರುಗಿ ಹೋಗಬೇಕು''–ಇದನ್ನು ಕೇಳಿ ಶ್ರೀಮಾತೆ ಹೇಳಿದರು, ''ನಾನೇ ವಾರುಣಿಯಾಗಿದ್ದೇನಲ್ಲ!''

### ೯. ಆಹ್ಲಾದಿನೀ ಘೋಷ್ (ಗಯಲಾದ ಸೊಸೆ)

ಆ ವರ್ಷ ಬರಗಾಲ ಬಂತು. ಗದ್ದೆಯ ಧಾನ್ಯವೆಲ್ಲ ಒಣಗಿ ಹೋಗಿತ್ತು. ಶ್ರೀಮಾತೆಯವರು ಸ್ನಾನ ಮಾಡಿ ಬಂದು ಸಿಂಹ ವಾಹಿನಿ ಮಂದಿರದಲ್ಲಿ ಪ್ರಣಾಮ ಮಾಡಿ ಹೀಗೆಂದರು: ''ನೀರಿ ಲ್ಲದಿದ್ದರೆ ಮಕ್ಕಳು ಮರಿಗಳು ತಿನ್ನಲು ಕುಡಿಯಲು ಸಾಧ್ಯವಿಲ್ಲ. ನಾನು ಹೇಗೆ ಅವರನ್ನು ನೋಡಿಕೊಳ್ಳಲಿ ತಾಯಿ? ಮಕ್ಕಳು ಮರಿ ಗಳು ಬಂದು ಹೇಳುತ್ತಾರೆ, 'ಚಿಕ್ಕಮ್ಮ, ತಿನ್ನಲು ಏನೂ ಸಿಗಲಿಲ್ಲ' ಅಂತ.'' ಶ್ರೀಮಾತೆಯವರು ಮನೆಗೆ ಮರಳಿ, ಶ್ರೀರಾಮಕೃಷ್ಣರ ಪೂಜೆಗೆ ಇನ್ನೇನು ಕುಳಿತಿದ್ದಾರೆ – ಅಷ್ಟರಲ್ಲಿ ಆಕಾಶದಲ್ಲಿ ಗುಡುಗು ಸಿಡಿಲಿನ ಸದ್ದು ಮೊಳಗಿತು. ಎಂಥ ಮಳೆಯಾಯಿ ತೆಂದರೆ, ಗದ್ದೆಬಯಲೆಲ್ಲ ಕೊಚ್ಚಿಕೊಂಡು ಹೋಯಿತು.

### ೧೦. ಇಂದುಮತಿ ದೇವಿ (ಶ್ರೀಮಾತೆಯವರ ತಮ್ಮನ ಪತ್ನಿ)

ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರು ಹೇಳಿದ್ದರು: ''ದಕ್ಷಿಣ ಭಾಗದಲ್ಲಿ ಬಾಗಿಲಿರುವ ಕೋಣೆಯಲ್ಲಿ ನೀನಿರು. ಇಲ್ಲದೆ ಹೋದರೆ ಜನರು ಹೇಳುತ್ತಾರೆ, ರಾಮಲಾಲನ ಚಿಕ್ಕಮ್ಮ ಬಟ್ಟೆಬರೆ ಹೊತ್ತುಕೊಂಡು ಬಂದಳು ಅಂತ. ರಾಮಲಾಲನಿಗೆ ಇಟ್ಟಿಗೆ ಮನೆ ಆದರೆ, ಅದರಲ್ಲಿ ನಿನ್ನ ಸ್ವಾರ್ಥವಿಲ್ಲ.'' ಶ್ರೀಮಾತೆ ಹೇಳಿದರು, ''ಠಾಕೂರರ ಮಾತಿನಿಂದಾಗಿ ರಾಮಲಾಲನಿಗೆ ಇಟ್ಟಿಗೆ ಮನೆಯನ್ನು ಕಟ್ಟಿಸಿದ್ದಾಯಿತು''ಅಂತ.

ಕಲ್ಕತ್ತೆಯಲ್ಲಿ (ಬಾಗ್‍ಬಜಾರಿನಲ್ಲಿ) ಶ್ರೀಮಾತೆ ಕೇಳಿದ್ದರು, ''ಏನಮ್ಮಾ ಗಗನನ ತಾಯಿ, (ಜಯರಾಮಬಾಟಿಯ ಒಬ್ಬಾಕೆ ಮಹಿಳೆ, ಕಲ್ಕತ್ತಾ ನೋಡಲು ಬಂದಿದ್ದಳು) ಬೇಲೂರು ಮಠಕ್ಕೆ ಹೋಗಿ, ಎಲ್ಲವನ್ನೂ ನೋಡಿ ಬಂದೆಯಾ?'' ಅದಕ್ಕೆ ಅವಳೆಂ ದಳು, ''ಅಮ್ಮಾ ! ಬೇಲೂರು ಮಠದಲ್ಲಿ ಎಷ್ಟೊಂದು ಒಳ್ಳೆಯ ಹಸುಗಳಿದ್ದಾವಮ್ಮಾ!'' ''ಏನಮ್ಮಾ, ನೀನು ಇನ್ನೇನೂ ನೋಡ ಲಿಲ್ಲವೆ? ಬರೀ ಹಸುಗಳನ್ನಷ್ಟೇ ನೋಡಿ ಬಂದೆಯಾ?''

ಒಂದು ಒಳ್ಳೆಯ ಹಿತ್ತಾಳೆಯ ಲೋಟವು ಗಂಗಾನದಿಯಲ್ಲಿ ಕಳೆದು ಹೋದುದ್ದಕ್ಕೆ ನಳಿನಿ ತುಂಬಾ ಗಲಾಟೆ ಮಾಡುತ್ತಿದ್ದಳು. ಆಗ ಶ್ರೀಮಾತೆ ಹೇಳದರು: ''ನಳಿನಿ, ಬಯ್ಯಬೇಡ. ಗಂಗೆ ಯಲ್ಲಿ ಏನಾದರೂ ವಸ್ತು ಕಳೆದುಹೋದರೆ ಅದಕ್ಕೆ ಚಿಂತೆ ಮಾಡ ಬಾರದು. ಅದೂ ಅಲ್ಲದೆ, ಬ್ರಾಹ್ಮಣರ ಬಳಿ ಏನಾದರೂ ವಸ್ತು ಇಲ್ಲದೆ ಹೋದರೆ ಅದಕ್ಕೂ ಚಿಂತೆ ಮಾಡಬಾರದು. ಗಂಗೆಯಲ್ಲಿ ಏನಾದರೂ ವಸ್ತು ಕಳೆದುಹೋದರೆ, ಅದೇ ವಸ್ತು ಹೆಚ್ಚಾಗು ವುದು; ಬ್ರಾಹ್ಮಣರ ಬಳಿ ಏನಾದರೂ ವಸ್ತು ಇಲ್ಲದೆ ಹೋದರೆ, ಅದೇ ವಸ್ತು ರಾಶಿರಾಶಿಯಾಗಿ ಬರುವುದು.''

ಹೊರಗಿನ ಮಂದಿ ಬಂದು ತನಗೆ ಇಂತಿಂಥ ಕಾಯಿಲೆ ಎಂದಾಗಲಿ, ಅಥವಾ ಇಂಥವರಿಗೆ ಇಂಥ ಕಾಯಿಲೆ ಎಂದಾಗಲಿ ಹೇಳತೊಡಗಿದರೆ ಶ್ರೀಮಾತೆಯವರಿಗೆ ಅಸಮಾಧಾನವುಂಟಾ ಗುತ್ತಿತ್ತು. ಅವರು ಹೇಳುತ್ತಿದ್ದರು: ''ಕಾಯಿಲೆಯ ವಿಷಯ ವನ್ನು ನನಗೇಕೆ ಹೇಳುತ್ತೀಯಾ? ಕಾಯಿಲೆಯ ವಿಷಯವನ್ನು ಕೇಳಬಾರದು.'' ಮತ್ತೆ ಅವರು ಹೇಳುತ್ತಿದ್ದರು, ''ಅನಾರೋಗ್ಯ ವಾಗಿದ್ದಾಗ ಯಾರಾದರೂ ಬಂದು, 'ಹೇಗಿದೆ?' ಎಂದು ಕೇಳಿ ದರೆ, 'ಹೇಗೋ ಇದೆ, ಹೋಗಲಿ ಬಿಡು' ಎನ್ನಬೇಕು.''

### ೧೧. ಉಪೇಂದ್ರ ಸರ್ಕಾರ್

ಒಂದು ಸಲ ನಾನು ಹೊಸ ಸೀರೆ ಹಾಗೂ ರೇಷ್ಮೆ ಕರವಸ್ತ್ರ ಗಳೊಂದಿಗೆ ಜಯರಾಮಬಾಟಿಗೆ ಹೋಗಿದ್ದೆ. ಶ್ರೀಮಾತೆಯವರು ತಮ್ಮ ಸ್ನಾನದ ಬಳಿಕ ಸೀರೆಯನ್ನು ಉಟ್ಟಿದ್ದರು; ಹಾಗೂ ಕರ ವಸ್ತ್ರದ ಮೇಲೆ ತಮ್ಮ ಪಾದಗಳನ್ನು ಇಟ್ಟುಕೊಂಡಿದ್ದರು. ನಾನು ಹೂ, ಶ್ರೀಗಂಧ, ತುಳಸಿ ಹಾಗೂ ಬಿಲ್ವಪತ್ರೆ ಇವುಗಳಿಂದ ಅವರ ಪಾದಪದ್ಮಗಳನ್ನು ಪೂಜಿಸಿದೆ. ಬಳಿಕ ಒಂದು ಅಧ್ಯಾಯ ಚಂಡೀ ಪಾಠ ('ಶ್ರೀದುರ್ಗಾಸಪ್ತಶತೀ' ಪಾರಾಯಣ) ಮಾಡಿದೆ. ಅನಂ ತರ ಶ್ರೀಮಾತೆಯವರ ಪಾದಗಳಲ್ಲಿ ತಲೆಯಿಟ್ಟು ನಮಸ್ಕರಿಸಿದೆ.

### ೧೨. ಉಮೇಶಚಂದ್ರ ದತ್ತ

ಸುಮಾರು ಎರಡು ಗಂಟೆಯ ಹೊತ್ತಿಗೆ ಜಯರಾಮಬಾಟಿ ಯಲ್ಲಿರುವ ಶ್ರೀಮಾತೆಯವರ ಕೋಣೆಯೊಳಗೆ ಹೋಗಿ

[೨] ಚೈತ್ರ ಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಮಾಡುವ ಸ್ನಾನದ ಉತ್ಸವ.

ನೋಡುತ್ತೇನೆ: ಶ್ರೀಮಾತೆಯವರು ರಾಧುವಿನ ಮಗುವನ್ನು ಮಡಿಲಲ್ಲಿರಿಸಿಕೊಂಡು ಕುಳಿತಿದ್ದರು. ಸ್ವಲ್ಪ ಹೊತ್ತಿನ ನಂತರ ಅವರು ಮಗುವಿನ ಚಿಕ್ಕ ಚಿಕ್ಕ ಬಟ್ಟೆಗಳನ್ನು ಬಿಸಿಲನಲ್ಲಿ ಒಣಗಿಸಲು ಹೋದರು, ಹಾಗೂ ಆಯಾಸಗೊಂಡು ಕುಳಿತುಬಿಟ್ಟರು. ನಾನು ಅವರಿಗೆ ಬೀಸಣಿಗೆಯಿಂದ ತುಸು ಗಾಳಿ ಬೀಸಿದೆ. ಬಟ್ಟೆಗಳನ್ನು ತಿರುವಿ ಹಾಕಲು ಸಮಯವಾಯಿತು ಎಂದು ನೆನಪಾಗಿ, ಅತ್ತ ಹೋದೆ. ಅವುಗಳಲ್ಲಿ ಒಣಗಿದ ಬಟ್ಟೆಗಳನ್ನು ತಂದು ಶ್ರೀಮಾತೆಯವರ ಪಕ್ಕದಲ್ಲಿಟ್ಟೆ. ಶ್ರೀಮಾತೆ ಪ್ರಸನ್ನರಾದವರಂತೆ ಕಂಡುಬಂದರು. ಆಗ ಅವರು ''ಲಕ್ಷ್ಮೀ, ಲಕ್ಷ್ಮೀ, ಲಕ್ಷ್ಮೀ!'' ಎಂದರು.

ಶ್ರೀಮಾತೆಯವರೇ ಹೇಳಿದ್ದನ್ನು ನಾನು ಕೇಳಿದ್ದೇನೆ: ''ಕೇದಾರ್ ಈಗ ಮಹಾರಾಜ್ ಆಗಿಬಿಟ್ಟಿದಾನೆ. ಭೂಮಿಯನ್ನೇ ಅಲುಗಾಡಿಸುತ್ತೇನೆ ಅಂತ ಭಾವಿಸುತ್ತಾನೆ. ಮೊದಲು ಪಾಠಶಾಲೆಯಲ್ಲಿ ಅಧ್ಯಾಪಕನಾಗಿದ್ದ; ಈಗ ಅಮ್ಮ-ಮಗ ಇಬ್ಬರೂ ಕುರ್ಚಿಯಲ್ಲಿ ಕುಳಿತು ಪರಾಮರ್ಶೆ ನಡೆಸುತ್ತಾರೆ. ತುಸು ಅಹಂಕಾರ ವುಂಟಾಗಿದೆ. (ಯುವಕರು) ಎಲ್ಲವನ್ನೂ ತ್ಯಾಗಮಾಡಿ, ಶ್ರೀರಾಮಕೃಷ್ಣರ ಹೆಸರನ್ನು ಹೇಳಿಕೊಂಡು ಇಲ್ಲಿಗೆ ಬಂದಿದ್ದಾರೆ. ಚೆನ್ನಾಗಿ ಊಟ, ತಿಂಡಿ ಪಡೆಯದಿದ್ದರೆ ಹೇಗೆ ಇಲ್ಲಿ ಬದುಕಬೇಕು?''

''ಠಾಕೂರರ ಭಕ್ತರ ನಡುವೆ ಮಾಸ್ಟರ್ ಮಹಾಶಯನೇ ಆಕಡೆ – ಈಕಡೆ, ಎರಡೂ ದಿಕ್ಕಿನಲ್ಲಿ ಉನ್ನತನಾಗಿದ್ದಾನೆ. ಅವನ ಹಾಗೆ ಬೇರೆ ಯಾರೂ ಇಲ್ಲ.''

### ೧೩. ಕುಸುಮಕುಮಾರಿ ದೇವಿ

ಎಣ್ಣೆ ತುಪ್ಪ, ಗೋಧಿಹಿಟ್ಟು ಇತ್ಯಾದಿ ಅಡುಗೆ ಸಾಮಾನುಗಳು ಉಗ್ರಾಣದಲ್ಲಿ ಇರಲಿಲ್ಲ. ಈ ವಿಷಯವನ್ನು ತಿಳಿಸಿದಾಗ ಶ್ರೀಮಾತೆ ಹೇಳಿದರು: ''ಸರಿಯಾಗಿ ನೋಡಮ್ಮಾ, ಅಲ್ಲಿ ಇವೆ.'' ಮತ್ತೆ ಹೋಗಿ ನೋಡಿದಾಗ, ಆ ದಿನಕ್ಕೆ ಬೇಕಾದಷ್ಟು ಸಾಮಾನು ಸಿಕ್ಕಿತು. ಒಂದು ಹೊತ್ತು ಹತ್ತು ಸೇರು, ಇನ್ನೊಂದು ಹೊತ್ತು ಮತ್ತೆ ಹತ್ತು ಸೇರು ಅಕ್ಕಿ ಅಡುಗೆಯಾಗುತ್ತಿತ್ತು. ಯಾವುದೋ ಒಂದು ದಿನ ಅಕ್ಕಿ ಅಳೆಯುವುಕ್ಕೆ ಹೋದರೆ, ಅವತ್ತಿಗೆ ಬೇಕಾದಷ್ಟು ಇರಲಿಲ್ಲ. ಮರುದಿನ ಅಕ್ಕಿ ಸಂಗ್ರಹವಾಗುವುದು. ಶ್ರೀಮಾತೆಯವರು ಹೇಳಿದರು, ''ಇನ್ನೊಂದು ಸಾರಿ ಅಳೆದು ನೋಡು.'' ಮತ್ತೆ ನಾನು ಅಳೆದು ನೋಡಿದರೆ, ಅಕ್ಕಿ ಬೇಕಾದಷ್ಟು ಇದ್ದೇ ಇತ್ತು. ಶ್ರೀಮಾತೆ ಹೇಳಿದರು, ''ನೀನು ಮೊದಲು ಅಳೆದು ನೋಡಿದಾಗ ಲೆಕ್ಕ ತಪ್ಪಾಗಿತ್ತು.''

### ೧೪. ಕೃಷ್ಣಘನ ಚಟರ್ಜಿ

ಜಯರಾಮಬಾಟಿಯಲ್ಲಿ ಕೆಲವು ಮಂದಿ ಮಂತ್ರದೀಕ್ಷೆ ಪಡೆದು ಹೊರಟುಹೋದ ನಂತರ, ಕೊನೆಯಲ್ಲಿ ನನ್ನ ದೀಕ್ಷೆಯಾಯಿತು. ಶ್ರೀಮಾತೆಯವರ ಪಾದಪದ್ಮಗಳನ್ನು ಪೂಜಿಸಲು ಹೋದಾಗ, ಪುಷ್ಪಪಾತ್ರೆಯಲ್ಲಿ ಒಂದು ಹೂ ಕೂಡ ಇರಲಿಲ್ಲ. ಶ್ರೀಮಾತೆ ಹೇಳಿದರು: ''ಯಾಕೆ ಚಿಂತೆ ಮಾಡುತ್ತೀ ಮಗು, ಗಂಗಾಜಲದಿಂದ ಗಂಗಾಪೂಜೆ ಮಾಡಲಾಗದೆ?'' ನಾನು ನಿರ್ಮಾಲ್ಯದ ಹೂಗಳನ್ನೇ ಅವರ ಪಾದಗಳಿಗೆ ಅರ್ಪಿಸಿ ಪ್ರಣಾಮ ಮಾಡಿದೆ.

### ೧೫. ಕೃಷ್ಣಮಯೀ ದೇವಿ (ರಾಮಲಾಲ ದಾದಾನ ಮಗಳು)

''ಪರಮಹಂಸರು ಯಾವಾಗ ಸಿದ್ಧರಾದರು?''[೩] –ಎಂದು ಕಾಮಾರಪುಕುರದಲ್ಲಿ ಒಬ್ಬಾಕೆ ಹೆಣ್ಣುಮಗಳು ಪ್ರಶ್ನಿಸಿದಳು. ಶ್ರೀಮಾತೆ ಹೇಳಿದರು: ''ಸಿದ್ಧವಾದದ್ದನ್ನು ನೋಡಿಯೇ ಇದ್ದೇನೆ, ಆದರೆ ಅಕ್ಕಿಯಾಗಿ ಯಾವತ್ತೂ ನೋಡೇ ಇಲ್ಲ!''


### ೧೬. ಗೌರೀಕಾಂತ ವಿಶ್ವಾಸ್

ಜಯರಾಮಬಾಟಿಯಿಂದ ಹೊರಡಬೇಕಾಗಿದೆ. ಚಾರು ದಾದಾ ಹಾಗೂ ಯತೀನ್ ದಾದಾ ಸಂನ್ಯಾಸ ಸ್ವೀಕಾರ ಮಾಡುವ ವಿಷಯವಾಗಿ ಶ್ರೀಮಾತೆಯವರಿಗೆ ನಿವೇದಿಸಿಕೊಂಡರು. ಅವರು ಇನ್ನಿಲ್ಲದೆ ಒತ್ತಾಯ ಮಾಡಿದಾಗ ಕೊನೆಯಲ್ಲಿ ಶ್ರೀಮಾತೆ ಹೇಳಿದರು: ''ಆಗಲಿ ಬಿಡಿ, ಅದು ನಡೆದೀತು.'' ಅದನ್ನು ಕೇಳಿ ನಾನು ಕೇಳಿದೆ – ''ಅಮ್ಮಾ, ನಾನು ಇನ್ನೆಷ್ಟು ದಿನ ಸಂಸಾರದಲ್ಲಿ ಇರಬೇಕಾಗುವುದು?'' ಅದಕ್ಕೆ ಅವರೆಂದರು – ''ಚಿಕ್ಕ ಹುಡುಗ–!'' ಅವರು ಹೇಗೆ ಹೇಳಿದರೆಂದರೆ, ಮತ್ತೆ ನನಗೆ ಮಾತನಾಡಲು ಧೈರ್ಯ ಬರಲಿಲ್ಲ. *(ಮುಂದಿನ ಸಂಚಿಕೆಗೆ)*

---

೩ 'ಸಿದ್ಧ' ಎಂದರೆ ಬಂಗಾಳಿಯಲ್ಲಿ ಬೆಂದ ಪದಾರ್ಥ ಎಂಬ ಅರ್ಥವೂ ಇದೆ.

**ಯುವಚೇತನ**



## ನಮ್ಮ ಧರ್ಮ

ಪ್ರತಿಯೊಂದು ದೇಶದಲ್ಲಿಯೂ ದೋಷಗಳಿವೆ. ಆದರೆ ಅವು ಧರ್ಮದಿಂದ ಆದವುಗಳಲ್ಲ; ಧರ್ಮವನ್ನು ಅನುಸರಿಸದೆ ಇರುವುದರಿಂದ ಆದವುಗಳು. ನೀನೊರ್ವನೇ ಅನೇಕವಾಗಿ ಸರ್ವಭೂತಗಳಲ್ಲಿಯೂ ಇರುವೆ ಎಂದು ನಿಮ್ಮ ಧರ್ಮ ಸಾರುವುದು. ಆದರೆ ಇದನ್ನು ಅನುಷ್ಠಾನಕ್ಕೆ ತರಲಿಲ್ಲ, ದಯೆ ಬೀರಲಿಲ್ಲ. ಇದು ನಮ್ಮ ತಪ್ಪು. ಆದ್ದರಿಂದ ಧರ್ಮವನ್ನು ದೂರಬೇಕಾಗಿಲ್ಲ, ಜನರನ್ನು ದೂರಬೇಕಾಗಿದೆ.

ಹಿಂದೂಧರ್ಮದಷ್ಟು ಮಾನವನ ಉತ್ಕೃಷ್ಟತೆಯನ್ನು, ಮಹಿಮೆಯನ್ನು ಉಚ್ಚ ರೀತಿಯಲ್ಲಿ ಹೇಳುವಂತೆ ಮತ್ತಾವ ಧರ್ಮವೂ ಹೇಳುವುದಿಲ್ಲ. ಆದರೆ ಹಿಂದೂ ಧರ್ಮದಲ್ಲಿ ದರಿದ್ರರನ್ನು, ದೀನರನ್ನು ತುಳಿಯುವಂತೆ ಮತ್ತಾವ ಧರ್ಮದಲ್ಲಿಯೂ ಇಲ್ಲ. ಇದು ಧರ್ಮದ ತಪ್ಪಲ್ಲವೆಂದು ದೇವರು ನನಗೆ ತೋರಿರುವನು. *('ಯುವಕರಿಗೆ ಕರೆ', ಪು.೨೦)*

# ಪ್ರಭು ಪರಮೇಶ್ವರನೇ ರಕ್ಷಕನಾದಾಗ

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**



**ಪ**ರಿವ್ರಾಜಕ ಸಂನ್ಯಾಸಿಯು ಚಂಬಾ ತಪ್ಪಲಿನ (ಪಂಜಾಬ್) ಕೆಳಗಿನ ಪಠಾಣಕೋಟ್ ಕಡೆಗೆ ಬರುತ್ತಿದ್ದಾನೆ. ವರ್ಷಾ ಋತು, ಮತ್ತು ಭಾರೀ  ಮಳೆ ಸುರಿಯುತ್ತಿದೆ. ಅವನಲ್ಲಿ ಕೊಡೆಯೂ ಇಲ್ಲ. ಒಂದು ತೆಳ್ಳಗಿನ ಕಂಬಳಿಯೇ ಕೊಡೆಯ ಕೆಲಸವನ್ನು ಮಾಡುತ್ತಿದೆ. ಆದರೆ ಅದೂ ಕೂಡ ನೀರಿನಿಂದ ತೊಪ್ಪೆಯಾಗಿ ಭಾರವಾಗುತ್ತಿದೆ, ಹಾಗಾಗಿ ಆಗಾಗ್ಗೆ ಅದನ್ನು ತೆಗೆದು ಹಿಂಡಿ ಮೈಯನ್ನು ಒರೆಸಬೇಕಾಗುತ್ತಿದೆ. ೧೨-೧೩ ಮೈಲಿಗಳ ಅಂತರದಲ್ಲಿ ಒಂದು ಹಳ್ಳಿ ಇದೆ. ಹಾದಿಯಲ್ಲಿ ಉಳಿದುಕೊಳ್ಳುವಂಥ ಯಾವುದೇ ಯೋಗ್ಯ ಸ್ಥಳವಿಲ್ಲ. ಪಠಾಣಕೋಟದಿಂದ ಈ ಸಣ್ಣ ಹಾದಿಯ ದೂರ ಪಠಾಣಕೋಟ – ಡಾಲ್‌ಹೌಸಿ – ಚಂಬಾದ ದಾರಿಗಿಂತ ೧೫ – ೨೦ ಮೈಲುಗಳಷ್ಟು ಕಮ್ಮಿ ಇದೆ.

ದೂರದಿಂದ ಹಳ್ಳಿಯು ಕಂಡಿತು. ಒಂದು ಸಣ್ಣ ಕಾಲುವೆಯನ್ನು ದಾಟಿ ಹೋಗಬೇಕಾಗಿದೆ. ಆದರೆ ಅಯ್ಯೋ, ರಸ್ತೆ ಕುಸಿದು ಬಹಳ ದೂರದವರೆಗೂ ಕಾಣದಂತಾಗಿಬಿಟ್ಟಿದೆ. ಮುಂದೆ ಹೋಗಲು ಯಾವುದೇ ಹಾದಿ ಕಣ್ಣಿಗೆ ಕಾಣಿಸುತ್ತಿಲ್ಲ. ಹಾಗಾಗಿ ಏನು ಮಾಡಲಿ ಎಂದು ಸಂನ್ಯಾಸಿ ಯೋಚಿಸುತ್ತಿದ್ದಾನೆ. ಅಷ್ಟರಲ್ಲೇ ಸರಿಸುಮಾರು ಅರ್ಧಮೈಲು ಕೆಳಗೆ ಸೀದಾ ಚಂಬಲ್ ನದಿಯ ಹತ್ತಿರ ಹೋಗುವ ಒಂದು ಕಾಲುದಾರಿ ದೃಷ್ಟಿಗೆ ಬಿತ್ತು. ಅದು ಕುಸಿದಿರುವ ರಸ್ತೆಯನ್ನು ದಾಟಿ, ವೇಗವಾಗಿ ನದಿಯನ್ನು ಹೋಗಿ ಸೇರಿ, ಅದರದೇ ಆ ದಡಕ್ಕೆ ಹೋಗಿ ರಸ್ತೆಯನ್ನು ತಲುಪುತ್ತಿತ್ತು. ಮುಂದಿರುವ ಸೇತುವೆಯನ್ನು ದಾಟಲು ಇದೊಂದೇ ಮಾರ್ಗ ಈಗ; ಇಲ್ಲದಿದ್ದರೆ ಮೇಲೆ ಒಂದು ಎತ್ತರದ ಬೆಟ್ಟ ಇತ್ತು, ಅದರ ಮೇಲೆ ಹತ್ತಲು ಯಾವುದೇ ದಾರಿ ಇರಲಿಲ್ಲ. ಹಾಗಾಗಿ ಪರಿವ್ರಾಜಕ ಸಂನ್ಯಾಸಿ ಕೆಳಗಿಳಿದು ಚಂಬಲ್‌ನ ಹತ್ತಿರ ತಲುಪಿದ.

ಚಂಬಲ್ ನದಿ ಭೀಕರ ರೂಪ ತಾಳಿ ನರ್ತಿಸುತ್ತಿತ್ತು. ಗರ್ಜಿಸುತ್ತಾ ಭಯಂಕರ ವೇಗದಿಂದ ಸಾಗುತ್ತಿತ್ತು. ನೀರಿನಿಂದ ಪೂರ್ತಿ ತುಂಬಿ ಹೋಗಿತ್ತು ಚಂಬಲ್. ಅದರ ಪ್ರವಾಹವು ಮೇಲಿದ್ದ ಸೇತುವೆಗಿಂತ ಕೊಂಚವೇ ಕೆಳಗೆ ಇತ್ತು. ಆದರೆ ಅದರ ರಭಸ ಮಾತ್ರ ಎಷ್ಟು ತೀವ್ರವಾಗಿತ್ತು ಎಂದರೆ, ಒಂದು ಚೂರು ಕಾಲು ಜಾರಿದರೆ ಸೀದಾ ಚಂಬಲಿನ ತೆಕ್ಕೆಗೇ ಬೀಳಬೇಕಾಗಿತ್ತು. ಬಂಡೆಗಳ ಮೇಲೆ ಹರಿದು ಮುನ್ನುಗ್ಗಿ ಧುಮುಕುತ್ತಿದ್ದ ನದಿ ಎಷ್ಟು ವೇಗವಾಗಿತ್ತು ಎಂದರೆ ಒಂದು ಕ್ಷಣ ಕಣ್ಣು ತಪ್ಪಿದರೆ ಅದರಲ್ಲಿ ಬೀಳುವುದೇ ತಡ, ಕ್ಷಣಮಾತ್ರದಲ್ಲಿ ಸಾವು ಖಚಿತ ಎನ್ನುವಂತಿತ್ತು.

ಈಗ ಏನು ಉಪಾಯ ಮಾಡುವುದು? ಆ ಭಯಂಕರ ಮಳೆಯಲ್ಲಿ ಸಹಾಯ ಮಾಡುವ ಯಾವುದೇ ಮನುಷ್ಯನೂ ಕಾಣಸಿಗುತ್ತಿಲ್ಲ. ಹಾಗಾಗಿ ದಾಟಿಕೊಂಡು ಹೋಗುವುದು ಒಂದೇ ಮಾರ್ಗವಿತ್ತು. ಹರಿಯುತ್ತಿದ್ದ ನೀರಿನಲ್ಲಿ ಎರಡು ಹೆಜ್ಜೆ ಇಟ್ಟು ಮುಂದೆ ಹೋದಾಕ್ಷಣ ಅವನ ಒಂದು ಕಾಲಿನ ಅರ್ಧಕ್ಕಿಂತಲೂ ಹೆಚ್ಚು ಭಾಗ ಆಳವಾದ ಕೊಚ್ಚೆಯಲ್ಲಿ ಸಿಕ್ಕಿಹಾಕಿಕೊಂಡಿತು. ಕೈಯಲ್ಲಿದ್ದ ಉದ್ದವಾದ ಕೋಲು ಸಹ ಹೆಚ್ಚೂಕಡಿಮೆ ಮುಕ್ಕಾಲು ಭಾಗ ಮಣ್ಣಿನೊಳಗೆ ಹೂತುಹೋಯಿತು. ಸಂನ್ಯಾಸಿ ಒಂದು ಅಸಹಾಯಕ ಅವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡ.

ಈಗ ಕೆಳಗೆ ನೀರಿನ ರಭಸ ಇತ್ತು ಮತ್ತು ಮೇಲಿಂದ ಮೇಘರಾಜನು ಮಳೆಯನ್ನು ಸುರಿಸಲು ಪ್ರಾರಂಭಿಸಿದ್ದ. ಹಿಮಾಲಯದ ತಪ್ಪಲಿನ ಶೀತಗಾಳಿ ಬೀಸುತ್ತಿತ್ತು ಮತ್ತು ಇಡೀ ಬಟ್ಟೆಯೆಲ್ಲ ಒದ್ದೆಯಾಗಿ ಸಹಿಸಲಾರದ ಕಷ್ಟವಾಗುತ್ತಿತ್ತು. ಈಗ ಸಾವು ಸನ್ನಿಹಿತವೇ ಎಂದುಕೊಂಡ ಸಂನ್ಯಾಸಿ ಅಂತಿಮ ಸ್ಮರಣೆ ಮಾಡಲು ತೊಡಗಿದ. ಕಣ್ಣು ಮುಚ್ಚಿ ಸಾವಿನ ಹಾದಿಯನ್ನು ಕಾಯ ತೊಡಗಿದ. ಮನಸ್ಸಿನಲ್ಲಿ ಒಂದೇ ಭಾವವಿತ್ತು, ''ನಿನ್ನ ಇಚ್ಛೆಯೆಲ್ಲ ಪೂರ್ಣಗೊಳ್ಳಲಿ.''

ಒಂದು ದೊಡ್ಡ ಶಬ್ದವಾಯಿತು. ಅವನು ಚಕಿತನಾಗಿ ನೋಡುತ್ತಿದ್ದಾನೆ, ಅವನು ನಿಂತಿದ್ದ ಕಡೆ, ಸರಿಯಾಗಿ ಅವನ ಮೇಲೆಯೇ, ಸೇತುವೆಯಿಂದ ಮತ್ತೆ ಮಣ್ಣು ಮತ್ತು ಬಂಡೆಗಳು ಉರುಳುತ್ತಾ ಬರುತ್ತಿವೆ. ''ಆಯ್ತು ಇವೆಲ್ಲ ಬಂದು ನನ್ನನ್ನು ದಬ್ಬಿಬಿಡುತ್ತವೆ, ಈಗ ಜೀವನದಲ್ಲಿ ಏನೂ ಆಸೆ ಇಲ್ಲ ; ಪರಮೇಶ್ವರನ ಇಚ್ಛೆ ಬಹುಶಃ ಇದೇ ಏನೋ.. ಜೈ ಭಗವಾನ್..'' ಅವನು ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡು ಸಾವಿನ ನಿರೀಕ್ಷೆಯಲ್ಲಿ ಶಾಂತವಾಗಿ ನಿಂತಿದ್ದಾನೆ. ಆದರೆ ಇದೇನಿದು... ದೊಡ್ಡ ದೊಡ್ಡ ಬಂಡೆಗಳು ಉರುಳಿಕೊಂಡು ಬಂದು ಕೈಗೆಟಕುವ ದೂರದಲ್ಲಿ ನಿಂತುಬಿಟ್ಟಿವೆ .. ಮಳೆಯೂ ಕಮ್ಮಿ ಆಗಿದೆ.. ಅವನ ಇಚ್ಛೆ ಏನೋ ತಿಳಿಯದು.

ಹೌದು, ಈಗ ಹೂತುಕೊಂಡಿರುವ ಕಾಲನ್ನು ಮೆಲ್ಲಗೆ ತೆಗೆಯುವ ಪ್ರಯತ್ನವನ್ನಾದರೂ ಮಾಡಬಹುದಲ್ಲ.. ಕೈಯ ಹತ್ತಿರ ಇದ್ದ ದೊಡ್ಡ ಬಂಡೆಯನ್ನು ಬಿಗಿಯಾಗಿ ಹಿಡಿದು ಕಾಲು ಎಳೆದುಕೊಂಡು ನಿಂತು ನೋಡುತ್ತಾನೆ... ಮೇಲಿನಿಂದ ಬಂಡೆಗಳು ಮತ್ತು ಮಣ್ಣಿನ ರಾಶಿ ಬಿದ್ದ ಕಡೆ, ಅದಷ್ಟೇ ದೂರದಲ್ಲಿ ಒಂದು ದಾರಿಯೂ ಆಗಿಬಿಟ್ಟಿದೆ ಮತ್ತು ಅದರಿಂದಲೇ ಸೇತುವೆಯನ್ನು ದಾಟಲು ಸಾಧ್ಯವೂ ಆಗುತ್ತದೆ. ಕೆಳಗೆ ಉನ್ಮಾದಿನಿ ಚಂಬಲ್ ಹರಿಯುತ್ತಿದ್ದಾಳೆ.. ಪ್ರಭು, ನಿನ್ನ ಅಸೀಮ ಕರುಣೆಯೇ ಸರಿ.. ಯಾವುದನ್ನು ನಿಶ್ಚಿತವಾಗಿ ಸಾವು ಅಂದುಕೊಂಡಿದ್ದೆನೋ ಅದೇ ಜೀವನದ ಆಧಾರವಾಯಿತು.. ನಿನ್ನ ಲೀಲೆಯನ್ನು ಯಾರು ತಾನೇ ಅರ್ಥ ಮಾಡಿಕೊಳ್ಳಬಲ್ಲರು...''ಜೈ ದೇವಾ'' ಎಂದು ಕೃತಜ್ಞತಾಪೂರ್ವಕವಾಗಿ, ತುಂಬಿದ ಹೃದಯದಿಂದ ಬಹಳಷ್ಟು ಮಾತುಗಳು ಹೊರಹೊಮ್ಮಿದವು, ಅನೇಕ ಪ್ರೇಮಪೂರ್ಣವಾದ ಉದ್ಗಾರಗಳು ಹೊರಬಂದವು. ಆದರೆ ಅದಕ್ಕೆಲ್ಲ ಇದು ಉಪಯುಕ್ತ ಸ್ಥಳವಲ್ಲ ಎಂದು ಅಂತರ್ಯಾಮಿಯೇ ಬಲ್ಲ.

ಪ್ರೇಮ ತುಂಬಿದ ಹೃದಯದಿಂದ ಸಂನ್ಯಾಸಿ ಸೇತುವೆಯ ಹತ್ತಿರ ಹೊರಟ. ಅಲ್ಲಿಂದ ಹಳ್ಳಿಯ ಸಮೀಪದಲ್ಲೇ ಕಾಣುತ್ತಿತ್ತು. ಆ ಸೇತುವೆಯ ಮತ್ತೊಂದು ಕಡೆ ಒಂದು ಸಣ್ಣ ಅಂಗಡಿ ಇತ್ತು. ಅದರಲ್ಲಿ ಸಾಮಾನುಗಳು ಬಟ್ಟೆ ಇತ್ಯಾದಿ ಆವಶ್ಯಕ ವಸ್ತುಗಳಿದ್ದವು. ಹತ್ತಿರ ಹೋದ ಕೂಡಲೇ ಅಂಗಡಿಯವನು ಹೇಳಿದ — ''ಸೇತುವೆ ಬಂದ್ ಆಗಿದೆ, ಬೀಗ ಹಾಕಲಾಗಿದೆ, ಸೇತುವೆ ಅಪಾಯದಲ್ಲಿದೆ, ಓಡಾಡಲು ಅನುಮತಿಯಿಲ್ಲ. ಬಹಳ ನೀರು ಬಂದಿರುವ ಕಾರಣ ಕೈಗೆ ಎಟುಕುವಂತೆಯೇ ಇದೆ, ಅಲ್ಲಿ ಮುಳುಗಲು ಹೋಗಬೇಡಿ.. ಕೀಲಿ ಇದ್ದರೆ ಬೀಗ ತೆಗೆದು ದಯವಿಟ್ಟು ಹಳ್ಳಿಯ ಒಳಗೆ ಹೊರಟುಬಿಡಿ. ಇಲ್ಲಿ ಎಲ್ಲಿ ಇರುತ್ತೀರಿ?'' ಅಷ್ಟರಲ್ಲಿ ಮತ್ತೊಬ್ಬ ವ್ಯಕ್ತಿ ಒಳಗಿನಿಂದ ಬಂದು ಸಂನ್ಯಾಸಿಯನ್ನು ಕಂಡು ಹೇಳಿದ, ''ಬನ್ನಿ ಮಹಾಶಯರೇ, ಬನ್ನಿ, ಸ್ವಲ್ಪ ಬೆಂಕಿ ಕಾಯಿಸಿಕೊಳ್ಳಿ.. ಬಟ್ಟೆಗಳನ್ನು ಒಣಗಿಸಿಕೊಳ್ಳಿ. ಹೀಗೇ ಇದ್ದರೆ ಆರೋಗ್ಯ ಕೆಡುತ್ತದೆ. ನೀವು ಚಹಾ ಕುಡಿಯುತ್ತೀರಿ ತಾನೆ? ಓ.. ಚಹಾ ಮಾಡು... ಅರೆ, ನೀರಿನಲ್ಲಿ ನೆನೆದು ನಿಮ್ಮ ದೇಹವೆಲ್ಲಾ ಬಿಳಿಚಿಕೊಂಡಿದೆ...'' ಹೀಗೆ ಹೇಳುತ್ತಾ ಸಂನ್ಯಾಸಿಯ ಕೈ ಹಿಡಿದು ಒಳಗೆ ಬೆಂಕಿಯ ಹತ್ತಿರ ಕರೆದುಕೊಂಡು ಹೋದ. ''ಎಲ್ಲಾ ತೆಗೆದು ಬಿಡಿ, ತಗೊಳ್ಳಿ ಈ ಬಟ್ಟೆ ಹೊಸದು, ಯಾರೂ ಧರಿಸಿಲ್ಲ. ಹಾಕಿಕೊಳ್ಳಿ. ಈ ಹೊಸ ಕಂಬಳಿ – ಹೊದ್ದುಕೊಳ್ಳಲು. ಈ ಹಳೆಯದನ್ನು ಬಿಚ್ಚಿಡಿ.. ಅಬ್ಬ – ಇದಂತೂ ನೀರಿನಿಂದ ಒದ್ದೆ ಒದ್ದೆಯಾಗಿದೆ'' ಬೆಂಕಿಯ ಅಗ್ಗಿಷ್ಟಿಕೆಯ ಹತ್ತಿರ ಇನ್ನೂ ಒಂದೆರಡು ಮೂರು ಕಂಬಳಿಗಳನ್ನು ಹಾಸಿ ಅವನು ಹೇಳಿದ, ''ಇದರ ಮೇಲೆ ಕುಳಿತುಕೊಳ್ಳಿ. ಬೆಚ್ಚಗೆ ಇರುತ್ತದೆ.'' ಬೆಂಕಿಯನ್ನು ಸ್ವಲ್ಪ ದೊಡ್ಡದಾಗಿ ಮಾಡಿದ ಮೇಲೆ ಬೆಲ್ಲ ಹಾಕಿದ ಚಹಾ ಮಾಡಿದ ಮತ್ತು ಒಂದು ದೊಡ್ಡ ಕಟೋರಿಯಲ್ಲಿ ಪೂರ್ತಿ ಹಾಕಿ ಕುಡಿಯಲು ಕೊಟ್ಟ. ಚಹಾ ನೀಡಿದ ಮೇಲೆ ಅವನು ಹೇಳಿದ, ''ಮಹಾಶಯರೆ, ನೀವು ಕಂಬಳಿ ಹೊದ್ದು ಆರಾಮವಾಗಿ ಮಲಗಿಕೊಳ್ಳಿ. ನಾಳೆ ಸೇತುವೆ ತೆಗೆದ ಮೇಲೆ ಹೊರಡಿ. ಮಳೆ ಈಗ ನಿಂತಿದೆ. ರಾತ್ರಿಯೂ ಬಾರದಿದ್ದರೆ ನೀರಿನ ವೇಗ ಕಮ್ಮಿಯಾಗುತ್ತದೆ ಮತ್ತು ಸೇತುವೆ ತೆಗೆಯಲಾಗುತ್ತದೆ. ನೀವು ಆರಾಮವಾಗಿ ವಿಶ್ರಾಂತಿ ತೆಗೆದುಕೊಳ್ಳಿ'' ಎಂದ.

ಸಂನ್ಯಾಸಿ ಸುಸ್ತಾಗಿ ಬಿಟ್ಟಿದ್ದ. ಮೃತ್ಯುದವಡೆಯಿಂದ ಹೊರಬಂದ ದೈಹಿಕ ಆಯಾಸವೂ ಇತ್ತು, ಆ ಭಯಾನಕ ಪರಿಸ್ಥಿತಿಯನ್ನು ಎದುರಿಸಿದ ಮನಸ್ಸಿಗೆ ಆಘಾತವೂ ಆಗಿತ್ತು. ಮಲಗಿದ ಕೂಡಲೇ ನಿದ್ದೆ ಬಂದುಬಿಟ್ಟಿತು. ಸಂಜೆ ನಾಲ್ಕು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಚೆನ್ನಾಗಿ ನಿದ್ದೆ ಮಾಡಿದ. ಅವನು ಎದ್ದಾಗ ಎರಡು ಅಂಗಡಿಗಳ ಮಾಲೀಕರೂ ತಂಬಾಕು ಸೇವಿಸುತ್ತಾ ಹರಟೆ ಹೊಡೆಯುತ್ತಿದ್ದರು. ಒಬ್ಬ ಎದ್ದು ಬಿಸಿನೀರಿನ ಕಟೋರಿ ನೀಡಿ ಹೇಳಿದ, ''ಮುಖ ತೊಳೆಯಿರಿ.. ಕಿಚಡಿ ತಯಾರಿದೆ, ಬಿಸಿಬಿಸಿಯಾಗಿ ತಿನ್ನಿ, ಆರೋಗ್ಯಕ್ಕೆ ಒಳ್ಳೆಯದು.''

ಸಂನ್ಯಾಸಿಗೆ ಸಿಕ್ಕಾಪಟ್ಟೆ ಹಸಿವಾಗಿತ್ತು. ಕೈ ಕಾಲು ಮುಖ ತೊಳೆದು ಅಮೃತಸಮಾನವಾದ ತೆಳ್ಳಗಿನ ಕಿಚಡಿ ತಿಂದ. ಮಾತನಾಡುವ ಮನಃಸ್ಥಿತಿ ಇರಲಿಲ್ಲ, ಕಳೆದ ಘಟನೆಯನ್ನು ನೆನೆಯುತ್ತಾ ಮನದಲ್ಲೇ ಹೇಳುತ್ತಿದ್ದ.. ''ಈಶ್ವರನ ಲೀಲೆಯನ್ನು ಯಾರು ಅರ್ಥಮಾಡಿಕೊಳ್ಳಬಲ್ಲರು? ಸಾವು ನಿಶ್ಚಿತ ಎನ್ನುವ ಪರಿಸ್ಥಿತಿ ಇದ್ದಾಗ ದೇವರದೇ ಸಹಾಯ ಸಿಕ್ಕಿತು ಮತ್ತು ಈ ತಪ್ಪಲಿನಲ್ಲಿ ಈ ಸಹೋದರರ ಮನಸ್ಸಿನಲ್ಲಿ ಪ್ರೇರಣೆ ನೀಡಿ ಖಂಡಿತ ಅವನೇ ಸಹಾಯ ಮಾಡಿದ್ದಾನೆ. ಇಷ್ಟು ಪ್ರೇಮಪೂರ್ವಕ ಸತ್ಕಾರ ನನಗಂತೂ ವಿಸ್ಮಯವುಂಟುಮಾಡುತ್ತಿದೆ..''

''ನೀವು ಮಲಗಿಕೊಳ್ಳಿ ಮಹಾಶಯರೇ, ಮತ್ತೆ ಬೆಳಗ್ಗೆ ಚಹಾ ಮಾಡುವ ಸಮಯದಲ್ಲಿ ಕರೆಯುತ್ತೇನೆ.'' ಬೆಳಗ್ಗೆ ಸಂನ್ಯಾಸಿ ಎದ್ದು ನೋಡಿದಾಗ ಅವರಿಬ್ಬರೂ ಎದ್ದು ಕುಳಿತಿದ್ದರು. ಹೊರಗಡೆ ಜೋರಾಗಿ ಮಳೆ ಬರುತ್ತಿತ್ತು. ಆ ಸಜ್ಜನರು ಇವನ ಬಟ್ಟೆ ಮತ್ತು ಕಂಬಳಿಯನ್ನು ಒಣಗಿಸಿ ಮಡಿಸಿ ಹತ್ತಿರದಲ್ಲಿ ಇಟ್ಟಿದ್ದರು. ಸಂನ್ಯಾಸಿ ಸ್ನಾನ ಇತ್ಯಾದಿಗಳನ್ನು ಮುಗಿಸುವಷ್ಟರಲ್ಲಿ ಚಹಾ ತಯಾರಾಯಿತು. ''ಇವತ್ತು ಇಲ್ಲೇ ಉಳಿದುಕೊಳ್ಳಿ.. ಸೇತುವೆ ಬಹುಶಃ ಇವತ್ತು ತೆಗೆಯುವುದಿಲ್ಲ, ಚಿಂತೆ ಮಾಡಬೇಡಿ. ನಾವು ಸತ್ಸಂಗ ಮಾಡೋಣ.'' ಮಧ್ಯಾಹ್ನ ಭೋಜನದ ನಂತರ ಪ್ರಶ್ನೋತ್ತರದ ರೂಪದಲ್ಲಿ ಸ್ವಲ್ಪ ಧರ್ಮದ ಚರ್ಚೆಯಾಯಿತು. ಬಹಳ ಪ್ರೀತಿಯಿಂದ ಮಾತನಾಡುತ್ತಿದ್ದರು. ಆ ವೇಳೆಗೆ ಮಳೆ ನಿಂತಿತ್ತು. ಆ ಕಡೆಯಿಂದ ಪೋಲಿಸಿನವನು ಬಂದು ಸೇತುವೆಯ ಬಾಗಿಲನ್ನು ತೆಗೆಯಲು ಹೇಳಿದ. ಬಾಗಿಲು ತೆಗೆದ ತಕ್ಷಣ ಸಂನ್ಯಾಸಿಯು ಪ್ರೀತಿ ಮತ್ತು ಕೃತಜ್ಞತೆಯಿಂದ ಆಶೀರ್ವಾದಗಳನ್ನು ನೀಡುತ್ತಾ, ವಿದಾಯ ಹೇಳುತ್ತಾ ಹಳ್ಳಿಯ ಕಡೆ ನಡೆದ.

ಮಾನವತೆಯ ಈ ಸುಂದರ ರೂಪ ನೋಡಿ, ಅನುಭವಿಸಿದ ಅವನು ಮೂಕನಾಗಿಬಿಟ್ಟಿದ್ದ.